**<u>ಸಾಕ್ಷಿಯನ್ನು ಇಂದು ದಿ.04.11.2024 ರಂದು ಕರೆಯಿಂಸಿ ಪ್ರಮಾಣ ವಚನ ಭೋದಿಸಲಾಯಿತು</u>**
**<u>ಪಾಟೀ ಸವಾಲುಃ ಶ್ರೀ.ಎಸ್.ಎಸ್.ಜಿ., ವಿಶೇಷ ಸರಕಾರಿ ವಕೀಲರಿಂದ ಎದುರುದಾರರ ಪರವಾಗಿಃ</u>**

1) ನನ್ನ ಜಮೀನು ಸರ್ವೆ ನಂ.432/3 ಇದ್ದು, ಅದು ಒಟ್ಟು 06 ಎಕರೆ 20 ಗುಂಟೆ ಜಮೀನು ಇದ್ದು, ಅದರಲ್ಲಿ 02 ಎಕರೆ 20 ಗುಂಟೆ ಜಮೀನು ಸ್ವಾಧೀನಗೊಂಡಿರುತ್ತದೆ. ಅದರಲ್ಲಿ 2 ಗುಂಟಾ ಪೋಟ ಖರಾಬ ಇರುತ್ತದೆ.

2) **ನಾನು ಈ ಪ್ರಕರಣವಲ್ಲದೇ ಬೇರೆ ಯಾವುದೇ ನ್ಯಾಯಾಲಯದಲ್ಲಿ ನನ್ನ ಸ್ವಾಧೀನಗೊಂಡ ಜಮೀನಿಗೆ ಸಂಬಂದಿಸಿದಂತೆ ಹೆಚ್ಚುವರಿ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುವದಿಲ್ಲ.**

3) ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಮತ್ತು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನನಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿ. ನೋಟಿಸ ಜಾರಿ ಮಾಡಿದ ನಂತರ ಅಧಿಕಾರಿಗಳು ಬಂದು ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ **ಮಧಬಾವಿ** ಗ್ರಾಮಕ್ಕೆ ನಿಗದಿಮಾಡಿದ ಬೆಲೆಯನ್ನು ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

4) ಹೆಚ್ಚಿನ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ ದಿನಾಂಕ ನೆನಪಿಲ್ಲ. ಅರ್ಜಿಯನ್ನು ನಾನು ಸರಿಯಾದ ಸಮಯದಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

5) ನನ್ನ ಜಮೀನು ಸಂಪೂರ್ಣ ಒಣಬೇಸಾಯದ ಜಮೀನು ಎಂದರೆ ಸರಿ. ಆದರೆ ನನ್ನ ಜಮೀನು ಬಿನಶೇತ್ಕಿಗೆ ಯೋಗ್ಯವಾದ ಜಮೀನು ಇರುತ್ತದೆ.

6) ನಮ್ಮ ಜಮೀನು ಕೃಷಿ ಜಮೀನು ಎಂದರೆ ಸರಿ. ನಮ್ಮ ಜಮೀನದಲ್ಲಿ ಮಳೆಯಾಧಾರಿತ ಬೆಳೆಗಳನ್ನು ಬೆಳೆಯುತ್ತೇವೆ ಎಂದರೆ ಸರಿ. ನನ್ನ ಜಮೀನದಲ್ಲಿ ತೊಗರಿ, ಸೂರ್ಯಪಾನ, ಶೇಂಗಾ ಮತ್ತು ಗೋಧಿ ಬೆಳೆಗಳನ್ನು ಬೆಳೆಯುತ್ತೇವೆ ಎಂದರೆ ಸರಿ. ನನ್ನ ಜಮೀನಿನಿಂದ ವಾರ್ಷಿಕವಾಗಿ 10 ಲಕ್ಷ ಆದಾಯ ಬರುತ್ತದೆ ಎಂದು ನಾನು ಹೇಳಿದ್ದು, ಅದಕ್ಕೆ ಪೂರಕವಾದ ದಾಖಲೆಗಳನ್ನು ಹಾಜರುಪಡಿಸಿಲ್ಲ

ಎಂದರೆ ಸರಿ.

7) ನನ್ನ ಜಮೀನಿಗೆ ಸಂಬಂಧಿಸಿದಂತೆ ಪರಿಹಾರ ಸ್ವೀಕರಿಸಲು ಎದುರುದಾರರು ನನಗೆ ಕೊನೆಯ ಬಾರಿ ಕಲಂ.37(2) ರ ನೊಟೀಸನ್ನು ದಿನಾಂಕಃ 30.03.2019 ರಂದು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಕೋರಿ ನನ್ನ ರೆಫರೆನ್ಸ ಅರ್ಜಿಯನ್ನು ಎದುರುದಾರರ ಮುಂದೆ ದಿನಾಂಕಃ 25.06.2019 ರಂದು ಸಲ್ಲಿಸಿರುತ್ತೇನೆ ಎಂದರೆ ಸರಿ. ಹೀಗಾಗಿ ನಾನು ಕಾಲಮಿತಿಯೊಳಗೆ ಹೆಚ್ಚಿನ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

8) ನನ್ನ ಜಮೀನು ಸ.ನಂ.432/3 ಇದು ವಿಜಯಪುರದಿಂದ 20 ಕಿ.ಮೀ ದೂರ ಆಗುತ್ತದೆ ಎಂದರೆ ಸಾಕ್ಷಿಯು ಕೇವಲ 3 ಕಿ.ಮೀ ದೂರ ಆಗುತ್ತದೆ ಎಂದು ಹೇಳುತ್ತಾರೆ.

9) ನನ್ನ ಜಮೀನು ಕೃಷಿ ಪ್ರಧಾನ ಜಮೀನು ಆಗಿದ್ದು, ಅದನ್ನು ಬಿನಶೇತ್ಕಿ ಮಾಡಿಕೊಡುವಂತೆ ಜಿಲ್ಲಾಧಿಕಾರಿಗಳಿಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ.

10) ನಾನು ಹಾಜರುಪಡಿಸಿದ ನಿ.ಪಿ.3 ವಿಜಯಪುರ ಲೋಕಲ ಪ್ಲ್ಯಾನಿಂಗ ನಕಾಶೆಯಲ್ಲಿ ನನ್ನ ಜಮೀನು ಸರ್ವೆ ನಂಬರ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿ.ಪಿ.3 ನಕಾಶೆಯಲ್ಲಿ ನನ್ನ ಜಮೀನು ಸರ್ವೆ ನಂಬರನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿ.ಪಿ.4 ಮತ್ತು 5 ಅಧಿಸೂಚನೆಗಳಲ್ಲಿ ಮಧಬಾವಿ ಗ್ರಾಮಕ್ಕೆ ಸಂಬಂಧಿಸಿದಂತೆ ನನ್ನ ಜಮೀನು ಸರ್ವೆ ನಂಬರ ಕಂಡು ಬರುವುದಿಲ್ಲ ಎಂದರೆ ಸರಿ.

11) ನಿ.ಪಿ.8 ರ ನಾಲ್ಕು ಎನ್.ಎ., ಆದೇಶಗಳಾಗಿದ್ದು, ಅವು ನನ್ನ ಜಮೀನುಗಳಿಗೆ ಹೋಲಿಕೆಯಾಗುವುದಿಲ್ಲ ಮತ್ತು ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.8 ರ ಎನ್.ಎ., ಆದೇಶದ ಜಮೀನುಗಳು ನನ್ನ ಜಮೀನಿನಿಂದ 12-14 ಕಿ.ಮೀ ದೂರ ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ಕಿ.ಮೀ ದೂರ ಇರುತ್ತವೆ ಎಂದು ಸ್ವತಃ ಹೇಳುತ್ತಾರೆ.

12) ನಾನು ಹಾಜರುಪಡಿಸಿದ ನಿ.ಪಿ.9 ರ ಖರೀದಿ ಪತ್ರವು ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳುವ ಮೂರು ವರ್ಷಕ್ಕಿಂತ ಮೊದಲಿನದು ಇರುತ್ತದೆ ಎಂದರೆ ಸರಿ.

13) ನಿ.ಪಿ.9 ರಿಂದ 19 ಮಹಾಲಭಾಗಾಯತ, ಐನಾಪೂರ ಹಾಗೂ ತಿಡಗುಂದಿ ಗ್ರಾಮಗಳ ಖುಲ್ಲಾ ಜಾಗೆ ಜಮೀನುಗಳ ಖರೀದಿ ಪತ್ರಗಳು ಇದ್ದು, ಸದರಿ ಖರೀದಿ ಪತ್ರಗಳು ಯಾರಿಗೆ ಸಂಬಂಧಪಟ್ಟಿದ್ದು, ಯಾವ ಉದ್ದೇಶಕ್ಕೆ ಖರೀದಿ ಆಗಿರುತ್ತದೆ, ಎಷ್ಟು ಬೆಲೆಗೆ ಖರೀದಿಸಿರುತ್ತಾರೆ ಮತ್ತು ಸರ್ವೆ ನಂಬರ ಹೇಳಲು ಬರುವುದಿಲ್ಲ.

14) ಮಧಬಾವಿ ಗ್ರಾಮದಲ್ಲಿ ಸಾಕಷ್ಟು ಜಾಗೆ ಮತ್ತು ಜಮೀನುಗಳು ಮಾರಾಟವಾಗಿರುತ್ತವೆ ಎಂದರೆ ಸರಿ. ಮಧಬಾವಿ ಗ್ರಾಮದ ಯಾವುದೇ ಜಾಗೆಯ ಅಥವಾ ಜಮೀನುಗಳ ಖರೀದಿ ಪತ್ರ ಅಥವಾ ಖರೀದಿ ಪತ್ರಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ಮಧಬಾವಿ ಗ್ರಾಮದಿಂದ ಮಹಾಲಭಾಗಾಯತಗೆ

15 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ಮಧಬಾವಿ ಗ್ರಾಮದಿಂದ ಐನಾಪೂರ 20 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 3 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ತಿಡಗುಂದಿ ಗ್ರಾಮದಿಂದ ಮಧಬಾವಿ 22 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 12 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ನಾನು ಹಾಜರುಪಡಿಸಿದ ಮಹಾಲಭಾಗಾಯತ, ಐನಾಪೂರ ಹಾಗೂ ತಿಡಗುಂದಿ ಗ್ರಾಮದ ಖರೀದಿ ಪತ್ರದ ಜಮೀನುಗಳಿಗೂ ಹಾಗೂ ನಿ.ಪಿ.8 ರ ಎನ್.ಎ.ಆದೇಶದ ಜಮೀನುಗಳಿಗೂ ಮತ್ತು ನನ್ನ ಜಮೀನಿಗೂ ಇಂತಿಷ್ಟೇ ಅಂತರ ಇದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಡಿಪಸಿರುವುದಿಲ್ಲ.

15) ನಾನು ಹಾಜರುಪಡಿಸಿದ ನಿ.ಪಿ.20 ರ ಆದೇಶದ ಜಮೀನು ಇಂಡಿ ತಾಲೂಕಿನ ತಾಂಬಾ ಮತ್ತು ಬೆನಕನಳ್ಳಿ ಗ್ರಾಮದಾಗಿದ್ದು, ಅದು ನನ್ನ ಜಮೀನಿಗೆ ಸಂಬಂಧಪಡುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿ.ಪಿ.21 ರ ಆದೇಶದ ಜಮೀನು ವಿಜಯಪುರದ ಅಲಿಯಾಬಾದ ಗ್ರಾಮದಾಗಿದ್ದು, ಅದು ನನ್ನ ಜಮೀನಿಗೆ ಸಂಬಂಧಪಡುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿ.ಪಿ.22 ರ ಆದೇಶದ ಜಮೀನಿಗೂ ಮತ್ತು ನನ್ನ ಜಮೀನಿಗೂ 10-12 ಕಿ.ಮೀ ದೂರ ಇದ್ದು, ಅದರ ಮೌಲ್ಯವು ಸಹ ಹೆಚ್ಚಿಗೆ ಇರುತ್ತದೆ ಎಂದರೆ ಸರಿಯಲ್ಲ.

16) ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂ.6 ರಲ್ಲಿ ಮಹಲಭಾಗಾಯತ, ಐನಾಪೂರ, ಬುರಾಣಪುರ ಸ.ನಂ.181 ಹಾಗೂ ಮಧಬಾವಿ ಸ.ನಂ.365 ಕ್ಕೆ ಹೊಂದಿಕೊಂಡಂತೆ ನನ್ನ ಜಮೀನು ಅಂದಾಜು 2000 ಅಡಿ ದೂರದಲ್ಲಿ ಇರುತ್ತದೆ ಎಂದು ಹೇಳಿದ್ದು, ಅದನು ಸಾಭೀತುಪಡಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

17) ನನ್ನ ಸಾಕ್ಷ್ಯ ಪ್ರಮಾಣ ಪತ್ರದ 10, 13, 14 ಮತ್ತು 20 ನೇ ಪ್ಯಾರಾದಲ್ಲಿ ತೋರಿಸಿದ ಸ್ಥಳಗಳ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಖರೀದಿಸಿರುತ್ತಾರೆ ಎಂದರೆ ಸರಿ. ನನ್ನ ಜಮೀನದಲ್ಲಿ ಕೆನಾಲ ಹಾದು ಹೋಗಿದ್ದರಿಂದ ನನ್ನ ಜಮೀನು ಎರಡು ಭಾಗವಾಗಿರುತ್ತದೆ ಎಂದು ಹೇಳಿದ್ದು, ಅದಕ್ಕೆ ಪೂರಕವಾದ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

18) ನಾನು ಒಂದು ಎಕರೆಗೆ 4 ಕೋಟಿ 35 ಲಕ್ಷ ಪರಿಹಾರ ಕೇಳಿದ್ದು, ಅದಕ್ಕೆ ಸೂಕ್ತ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸರ್ಕಾರ ಸೂಕ್ತವಾದ ಬೆಲೆ ಕೊಟ್ಟಿದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.